ದಿನಾಂಕ 27.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

ಮುಂದುವರೆದ **ಮುಖ್ಯ ವಿಚಾರಣೆ:-** ವಾದಿ ಪರ ಶ್ರಿ.ಕೆ.ಕೆ.ಎಲ್ ವಕೀಲ **ರಿಂದ**

ನಾನು ದಾಖಲೆಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನನ್ನ ಪರವಾಗಿ ನಿಶಾನೆಗಳನ್ನಾಗಿ ಗುರುತಿಸಬೇಕೆಂದು ಪ್ರಾಥಿಸಿಕೊಳ್ಳುತ್ತೇನೆ.

1. ದಿನಾಂಕ 09.11.2022 ರಂದು ಪ್ರತಿವಾದಿಗಳು ಬರೆದುಕೊಟ್ಟ ನೋಂದಾಯಿತವಲ್ಲದ ಕ್ರಯದ ಕರಾರುಪತ್ರವನ್ನು (ದಿನಾಂಕ 05.12.2025 ರ ಆದೇಶದ ರೀತ್ಯಾ ವಾದಿಯು ರೂ.14,300/- ಗಳನ್ನು ಮುದ್ರಾಂಕ ಶುಲ್ಕ ಮತ್ತು ದಂಡವಾಗಿ ದಿನಾಂಕ 11-12-2025 ರಂದು ಪಾವತಿ ಮಾಡಿರುತ್ತಾರೆ) ನಿ.ಪಿ4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ4 ಎ ಎಂದು ಗುರುತಿಸಲಾಯಿತು. ನಿ.ಪಿ-4 ಕ್ಕೆ ಪ್ರತಿವಾದಿಯು ತನ್ನ ಹೆಬ್ಬೆಟ್ಟಿನ ಸಹಿ ಹಾಕಿರುತ್ತಾರೆ. ಸಾಕ್ಷಿದಾರರಾಗಿ ಕೆಂಗಣಯ್ಯ ಮತ್ತು ಲಕ್ಷ್ಮೀ ಪ್ರಸನ್ನ ಎಂಬುವವರು ಸಹಿಯನ್ನು ಮಾಡಿರುತ್ತಾರೆ. ಸಾಕ್ಷಿಯು ಸಾಕ್ಷಿದಾರರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ4(ಬಿ) ಮತ್ತು 4(ಸಿ) ಎಂದು, ಪತ್ರ ಬರಹಗಾರರಾದ ಎಸ್.ಆರ್.ನಾಗರಾಜುರವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿ.ಪಿ4(ಡಿ) ಎಂದು ಗುರುತಿಸಲಾಯಿತು.

ಈ ಎಲ್ಲಾ ಕಾರಣಗಳಿಗಾಗಿ ನಾನು ಸಲ್ಲಿಸಿರುವ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲು: ಪ್ರತಿವಾದಿಯು ಏಕಪಕ್ಷೀಯವಾದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.